# "ಪತ್ರಿಕಾ ಪ್ರಕಟಣೆ"

## ಸ್ವಯಂ ಸೇವಾ ಗೃಹರಕ್ಷಕರ ಖಾಲಿ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ.

ಮಾನ್ಯ ಆರಕ್ಷಕ ಅಧೀಕ್ಷಕರು ಹಾಗೂ ಅಧ್ಯಕ್ಷರು, ಸ್ವಯಂ ಸೇವಾ ಗೃಹರಕ್ಷಕ/ಗೃಹರಕ್ಷಕಿಯರ ಆಯ್ಕೆ ಸಮಿತಿ, ಕೋಲಾರ ಇವರ ಅನುಮೋದನೆ ಮೇರೆಗೆ ಕೋಲಾರ ಜಿಲ್ಲೆಯಲ್ಲಿ ಖಾಲಿ ಇರುವ ಸ್ವಯಂ ಸೇವಾ ಗೃಹರಕ್ಷಕ/ಗೃಹರಕ್ಷಕಿಯರ ಹುದ್ದೆಗಳನ್ನು ಆಯ್ಕೆ ಮಾಡುವ ಸಲುವಾಗಿ ಒಟ್ಟು 330 ಗೃಹರಕ್ಷಕರ ನೋಂದಣಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತದೆ.

ಗೃಹರಕ್ಷಕರ ನೋಂದಣಿ ಅರ್ಜಿಗಳನ್ನು ಜಿಲ್ಲಾ ಗೃಹರಕ್ಷಕದಳದ ಕಛೇರಿ, ಕೋಲಾರ ಟಮಕ ಕೈಗಾರಿಕಾ ಪ್ರಾಂಗಣದ ಹತ್ತಿರ ಇಲ್ಲಿ ದಿನಾಂಕ 23-11-2020 ರಿಂದ 05-12-2020 ರ ವರೆಗೆ ಕಛೇರಿ ಅವಧಿಯಲ್ಲಿ ನೀಡಲಾಗುವುದು. (ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ಹಾಗೂ ಪೊಲೀಸ್ ಇಲಾಖೆಯ ಅಂತರ್‌ಜಾಲ **www.kolarpolice.com** ನಲ್ಲಿ ಅರ್ಜಿಗಳು ಲಭ್ಯವಿದ್ದು, ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಲಾದ ಅರ್ಜಿಗಳನ್ನು ದಿನಾಂಕ:05-12-2020 ರಂದು ಸಂಜೆ 05.30 ರ ಒಳಗಾಗಿ ಈ ಕಛೇರಿಗೆ ನೇರವಾಗಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸುವುದು. ದಿನಾಂಕ:05-12-2020 ರ ನಂತರ ಬರುವ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಂಪ್ಯೂಟರ್ ಹಾಗೂ ಡ್ರೈವಿಂಗ್ ಪರವಾನಗಿ ಹೊಂದಿರುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಗೃಹರಕ್ಷಕದಳದ ಸಂಸ್ಥೆಯು ಒಂದು ಸ್ವಯಂ ಸೇವ ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಯಲ್ಲಿ 3 ವರ್ಷಗಳ ಅವಧಿಗೆ ಮಾತ್ರ ಸೇವೆ ಸಲ್ಲಿಸಬಹುದಾಗಿದ್ದು, ಇದು ಖಾಯಂ ನೌಕರಿಯಾಗಿರುವುದಿಲ್ಲ. ಯಾವುದೇ ರೀತಿಯ ಮಾಸಿಕ ಸಂಬಳ / ವಿಶೇಷ ಭತ್ಯೆಗಳನ್ನು ಈ ಸಂಸ್ಥೆಯು ನೀಡುವುದಿಲ್ಲ. ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ಗೌರವ ಧನವಾಗಿ ದಿನವೊಂದಕ್ಕೆ ರೂ 750/- (ಏಳು ನೂರ ಐವತ್ತು ರೂಪಾಯಿಗಳು ಮಾತ್ರ) ಹಾಗೂ ಅನ್ಯ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ದಿನವೊಂದಕ್ಕೆ 380/- (ಮೂರು ನೂರ ಎಂಬತ್ತು ರೂಪಾಯಿಗಳು ಮಾತ್ರ)ರಂತೆ ಹಾಗೂ ಬೆಂಗಳೂರಿನ ಅನ್ಯ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುವ ಗೃಹರಕ್ಷಕರಿಗೆ ದಿನವೊಂದಕ್ಕೆ 455/- (ನಾಲ್ಕು ನೂರ ಐವತ್ತೈದು ರೂಪಾಯಿಗಳು ಮಾತ್ರ) ರಂತೆ ಕೋರಿಕಾ ಪ್ರಾಧಿಕಾರವೇ ನೇರವಾಗಿ ಪಾವತಿಸಲಾಗುವುದು. ಪ್ರತಿ ಮಾಹೆಯಲ್ಲಿ 4 ಕವಾಯತುಗಳನ್ನು ವಾರದಲ್ಲಿ ಒಂದು ದಿನದಂತೆ 3 ಗಂಟೆ ಅವಧಿ ನಡೆಸಲಾಗುವುದು.

ಯಾವುದೇ ಕಾರಣಕ್ಕೂ ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸದಿರಲು ತಿಳಿಸಲಾಗಿದೆ. ಗೃಹರಕ್ಷಕರಾಗಿ ಸೇರಲು ಹಣಕಾಸಿನ ಬಗ್ಗೆ ಯಾರೇ ಕೇಳಿದರೂ ಹಾಗೂ ನೀಡಿದರೂ ಕಾನೂನು ರೀತ್ಯಾ ಶಿಕ್ಷೆಗೆ ಒಳಗಾಗುತ್ತಾರೆ.

ಪುಟ 2ಕ್ಕೆ

**ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.**

1) ಶ್ರೀ. ಕೆ.ಆರ್. ಕಿರಣ್‌ಕುಮಾರ್, ಸಮಾದೇಷ್ಟರು, ಗೃಹರಕ್ಷಕದಳ, ಕೋಲಾರ ಜಿಲ್ಲೆ
2) ಶ್ರೀ. ಬಿ. ರವಿಕುಮಾರ್, ಸಹಾಯಕ ಬೋಧಕರು, ಗೃಹರಕ್ಷಕದಳ, ಕೋಲಾರ ಜಿಲ್ಲೆ ಮೊಬೈಲ್ ಸಂಖ್ಯೆ 7090440037, 9482233837
3) ಗೃಹರಕ್ಷಕದಳ ಕಛೇರಿ ದೂರವಾಣಿ ಸಂಖ್ಯೆ: 08152 – 243149

**ವಿದ್ಯಾರ್ಹತೆ :**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 10 ನೇ ತರಗತಿ ಉತ್ತೀರ್ಣರಾಗಿರಬೇಕು

**ವಯೋಮಿತ :**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು 19 ವರ್ಷ ಪೂರ್ಣಗೊಂಡಿರಬೇಕು ಹಾಗೂ 50 ವರ್ಷ ಮೀರಿರಬಾರದು

**ದೇಹದಾರ್ಢ್ಯತೆ :**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು

1.ಪುರುಷ : ಎತ್ತರ 168 ಸೆ.ಮೀ / ತೂಕ 50 ಕೆ.ಜಿ.ಯ ಮೇಲೆ /ಎದೆ ಸುತ್ತಳತೆ 81–86

2.ಮಹಿಳೆ: ಎತ್ತರ 157 ಸೆ.ಮೀ /ತೂಕ 45 ಕೆ.ಜಿ.ಯ ಮೇಲೆ /ಎದೆ ಸುತ್ತಳತೆ ಅನ್ವಯಿಸುವುದಿಲ್ಲ

**ಸಲ್ಲಿಸಬೇಕಾದ ದೃಢೀಕೃತ ದಾಖಲೆಗಳು**

1) ವಿದ್ಯಾರ್ಹತೆ 10 ನೇ ತರಗತಿ (ಅಂಕಪಟ್ಟಿ / ಟಿ.ಸಿ.)
2) ಜನ್ಮ ದಿನಾಂಕ ದೃಢೀಕರಣ ಪ್ರಮಾಣ ಪತ್ರ (ಟಿ.ಸಿ.)
3) ಬ್ಯಾಂಕ್ ಪಾಸ್ ಪುಸ್ತಕ (ಖಾತೆ ಚಾಲ್ತಿಯಲ್ಲಿರಬೇಕು)
4) ಆಧಾರ್ ಕಾರ್ಡ್
5) ಚುನಾವಣಾ ಗುರುತಿನ ಚೀಟಿ (ವೋಟರ್ ಐ.ಡಿ.)
6) ಪಾನ್ ಕಾರ್ಡ್
7) ಪಡಿತರ ಚೀಟಿ ಕಾರ್ಡ್ (ರೇಷನ್ ಕಾರ್ಡ್)
8) ವಾಹನ ಚಾಲನ ಪರವಾನಗಿ (ಡಿ.ಎಲ್.)
9) ವೈದ್ಯಕೀಯ ಪ್ರಮಾಣ ಪತ್ರ (ರಕ್ತದ ಗುಂಪು, ತೂಕ, ಎತ್ತರ ಒಳಗೊಂಡಂತೆ)
10) ಮೊಬೈಲ್ ಸಂಖ್ಯೆ
11) ಈ–ಮೇಲ್ ಐ.ಡಿ.
12) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ –2
13) ಅಭ್ಯರ್ಥಿಯ ಪೂರ್ಣ ವಿಳಾಸದೊಂದಿಗೆ ಪೋಸ್ಟ್ ಕಾರ್ಡ್ –1
14) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸುವುದು.

ಅಧ್ಯಕ್ಷರು / ಸದಸ್ಯ ಕಾರ್ಯದರ್ಶಿ
ಗೃಹರಕ್ಷಕ ಆಯ್ಕೆ ಸಮಿತಿ,
ಕೋಲಾರ ಜಿಲ್ಲೆ, ಕೋಲಾರ